

# ಮೇಟಿಕೆರೆ ಹಿರಿಯಣ್ಣ.(ಜಾನಪದ ವಿದ್ವಾಂಸ/ಸಾಹಿತಿ)

## ಬದುಕು–ಬರಹ:

ಹುಟ್ಟಿದ್ದು ೦೬–೧೦–೧೯೫೧ ರಲ್ಲಿ, ಹಾಸನ ಜಿಲ್ಲೆಯ ಮೇಟಿಕೆರೆಯಲ್ಲಿ. ಅವ್ವ ದೊಡ್ಡಮ್ಮ, ಅಪ್ಪ ಬಂಡಿಲಕ್ಕಣ್ಣಗೌಡ ಕೃಷಿಕ ಮತ್ತು ಸಂತೆ ವ್ಯಾಪಾರಿ. ಓದಿದ್ದು ಮೇಟಿಕೆರೆ,ಬೇವಿನಹಳ್ಳಿ,ಹಿರೀಸಾವೆ,ಹಾಸನ ಮತ್ತು ಮೈಸೂರುಗಳಲ್ಲಿ. ಇತಿಹಾಸದಲ್ಲಿ ಎಂ.ಎ ಪದವಿ, ಜಾನಪದದಲ್ಲಿ ಡಿಪ್ಲೊಮ.

೧೯೭೫ ರಲ್ಲಿ ಉಪನ್ಯಾಸಕನಾಗಿ ವೃತ್ತಿ ಆರಂಭ, ೧೯೯೬ ರಿಂದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ, ನೂರಾರು ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು. ಶಾಲಾಕಾಲೇಜಿನ ಗುಣಮಟ್ಟ ಹೆಚ್ಚಿಸಲು ನಿರಂತರ ದುಡಿಮೆ. ೧೦ನೇ ತರಗತಿಗೆ ಪೂರಕವಾದ ೬ ಕೃತಿಗಳ ಸಂಪಾದನೆ/ರಚನೆ, ಹಾಸನದಲ್ಲಿ ವಿದ್ಯಾರ್ಥಿಗಳ ನೆರವಿನಿಂದ ಪ್ರಯೋಗಾಲಯ ಕೊಠಡಿ ನಿರ್ಮಾಣ,ಹೆತ್ತೂರಿನಲ್ಲಿ  ಅನಿವಾಸಿ ಭಾರತಿಯ ಡಾ। ಅಪ್ಪಸ್ವಾಮಿ ಗೌಡರ ನೆರವು ಪಡೆದು ಗ್ರಂಥಾಲಯ ಕೊಠಡಿ ನಿರ್ಮಾಣ, ಪ್ರೌಢಶಾಲಾ ಮುಖ್ಯಸ್ಥರು ಮತ್ತು ಪ.ಪೂ.ಕಾಲೇಜು ಪ್ರಾಚಾರ್ಯರ ಸಂಘಕ್ಕೆ ಸುಮಾರು ೬೫೦೦ ಚ. ಅಡಿ ಕಟ್ಟಡ ನಿರ್ಮಾಣ,ಹಾಸನದಲ್ಲಿ ರಂಗಗೀತೆ ಪುನಶ್ಚೇತನ
ಕಾರ್ಯಕ್ರಮ – ಎರಡು ಭಾರಿ.

## ಸಂಘಟನೆ:

೧೯೮೩ ರಿಂದ ಮೂರು ವರ್ಷ ಲಯನ್ಸ್ ಕ್ಲಬ್ ಮೂಲಕ ಸೇವೆ.೧೯೯೭ ರಿಂದ ೨೦೦೪ ರವರೆಗೆ ಚನ್ನರಾಯಪಟ್ಟಣದ ಸರ್ಕಾರಿ ಅಧಿಕಾರಿಗಳ ಸಂಘದ ಕಾರ್ಯದರ್ಶಿ/ಅಧ್ಯಕ್ಷ. ೧೯೯೮ ರಿಂದ ಮೂರು ಭಾರಿ ಹಾಸನ ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯರು ಮತ್ತು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ, ಚನ್ನರಾಯಪಟ್ಟಣದ ಪ್ರೇರಣಾ ವೇದಿಕೆಯ ಸ್ಥಾಪಕ ಕಾರ್ಯದರ್ಶಿ, ಹಾಸನದ ಸಾಂಸ್ಕೃತಿಕ ವೇದಿಕೆಯ ಸ್ಥಾಪಕ ಸದಸ್ಯ, ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕಬ್ಬಡಿ ಪಂದ್ಯದ ಸಂಚಾಲಕ.

ಹಾಲಿ ಹಾಸನ ಜಿಲ್ಲೆಯ ಭೂಮಿ ಬಳಗದ ಸಂಚಾಲಕ. ೨೦೦೧ ರಿಂದ ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯರು ಮತ್ತು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ, ೨೦೦೧ ರಿಂದ ಕರ್ನಾಟಕ ರಾಜ್ಯ ಶಿಕ್ಷಕ/ ವಿದ್ಯಾರ್ಥಿ ಕಲ್ಯಾಣ ನಿಧಿಯ ರಾಜ್ಯ ಸಮಿತಿಯ ಸದಸ್ಯ, ಹಾಸನ ಆಕಾಶವಾಣಿ ಕೇಂದ್ರದ ಜಾನಪದ ವಿಭಾಗದ ಆಡಿಷನ್ ಸಮಿತಿಯ ಸದಸ್ಯ.

ವಿದ್ಯಾರ್ಥಿ ದೆಸೆಯಿಂದ ಜಾನಪದ ಕ್ಷೇತ್ರದಲ್ಲಿ ದುಡಿಮೆ. ಪುಸ್ತಕ ಪ್ರಾಧಿಕಾರ, ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿ, ಮೈಸೂರು ವಿಶ್ವವಿದ್ಯಾಲಯ ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ಜಾನಪದ ಗೋಷ್ಠಿಗಳಲ್ಲಿ ಪ್ರಭಂದ ಮಂಡನೆ, ಜಾನಪದ ಗೋಷ್ಠಿಯ ಅಧ್ಯಕ್ಷತೆ, ಬೆಂಗಳೂರಿನ ೧೯೭೫ರ ಕರ್ನಾಟಕ ರಾಜ್ಯ ಜಾನಪದ ಕಲಾಮೇಳ, ೧೯೭೬ರ ಹಾಸನ ಜಿಲ್ಲಾ ಜಾನಪದ ಮೇಳ,೧೯೮೬ ರಲ್ಲಿ ಸಕ್ರೆಪಟ್ಟಣದಲ್ಲಿ ನಡದ ಜಾನಪದ ಮೇಳ,೧೯೯೮ರಲ್ಲಿ ನುಗ್ಗೆಹಳ್ಳಿ, ಚನ್ನರಾಯಪಟ್ಟಣ ಮತ್ತು ಹಾಸನಗಳಲ್ಲಿ ನಡದ ಜಾನಪದ ಮೇಳಗಳ ಸಂಘಟಕ ಡಾ,ಜಿ ಶರೀಪ್, ಡಾ. ಎಚ್. ಎಲ್ ನಾಗೇಗೌಡರೊಡನೆ ಜಾನಪದ ಕೆಲಸ. ಹಾಸನ ಜಿಲ್ಲೆಯ ೧೫೦೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಜನಪದ ಕಲೆಗಳ ಬಗ್ಗೆ ಮಾಹಿತಿ ಸಂಗ್ರಹ.

ಸ್ಥಳೀಯ ಪತ್ರಿಕೆಗಳಲ್ಲಿ ಕವನ,ಲೇಖನ ಪ್ರಕಟ,ಆಕಾಶವಾಣಿಯಲ್ಲಿ ಜಾನಪದ ಚಿಂತನ  ಪ್ರಸಾರ ಭಾರತಿ ಆಕಾಶವಾಣಿ ಕಾರ್ಯಕ್ರಮದಲ್ಲಿ ಕವನವಾಚನ.

## ಕೃತಿಗಳು:

೧.ಭಾಗವಂತಿಕೆ ಪದಗಳು (ಜಾನಪದ ಸಂಗ್ರಹ ಮತ್ತು ಅಧ್ಯಯನ)
೨.ಚಿಲಿಪಿಲಿ (ಜಾನಪದ ಶಿಶು ಪ್ರಾಸಗಳ ಸಂಗ್ರಹ ಮತ್ತು ಅಧ್ಯಯನ)
೩.ಚಿಕ್ಕ (ಕಥನ ಕವನ)
೪.ಬ್ಯಾ ಬ್ಯಾ ಕುರಿಗಳೆ ನಿಮಗಿದು ಗೊತ್ತೆ (ಕವನ ಸಂಕಲನ)
೫.ದೀವಳಿಗೆ (ಕವನ ಸಂಕಲನ)
೬.ಬಿಸಿ ಬಿಸಿ ಕಜ್ಜಾಯ (ಕವನ ಸಂಕಲನ)
೭.ಓಜ ಮತ್ತು ಓಜನ ಆಜು ಬಾಜು (ಅನುಭವ ಕಥನ)
೮.ವಿಶ್ವದ ಪ್ರಸಿದ್ಧ ಇತಿಹಾಸಕಾರರು (ಸಂಪಾದಕ – ಇತರರೊಡನೆ)
೯.ಕರ್ನಾಟಕದ ಜನಪದ ಕಲೆಗಳು – ಕೃತಿಗೆ ಹಾಸನ ಜಿಲ್ಲೆಯ ಜನಪದ ಕಲೆಗಳ ಬಗ್ಗೆ ಲೇಖನ

**ಪ್ರಶಸ್ತಿ\ ಪುರಸ್ಕಾರ:**

೧. 'ಚಿಲಿಪಿಲಿ' ಗ್ರಂಥಕ್ಕೆ ೨೦೦೨ ರಲ್ಲಿ ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಆಕಾಡೆಮಿಯಿಂದ ಉತ್ತಮ ಕೃತಿ ಪ್ರಶಸ್ತಿ.
೨. 'ದೀವಳಿಗೆ' ಕವನ ಸಂಕಲನಕ್ಕೆ ಹೊರನಾಡ ಕನ್ನಡ ಸಂಘ ಕಾಸರಗೋಡು ಅವರಿಂದ ಪ್ರಶಸ್ತಿ.
೩. ೨೦೦೮ ರಲ್ಲಿ ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಆಕಾಡೆಮಿಯಿಂದ ಜಾನಪದದಲ್ಲಿ ಸಲ್ಲಿಸಿರುವ ಗಣನೀಯ ಸೇವೆಗಾನ ಸುವರ್ಣ ಕರ್ನಾಟಕ ಪ್ರಶಸ್ತಿ.
೪. ೨೦೦೭ ರಲ್ಲಿ ನಾಡು-ನುಡಿ ಸೇವೆಗಾಗಿ ಉಡುಪಿಯ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.
೫. ೨೦೦೭ ರಲ್ಲಿ ನಾಟಕಮನೆ ತುಮಕೂರು ಇವರಿಂದ ಜಾನಪದ ಸೇವೆಗಾಗಿ ಸನ್ಮಾನ.
೬. ಕಾರವಾರ,ಮಂಗಳೂರು,ಉಡುಪಿಗಳಲ್ಲಿ ನಡೆದ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನದ ಅಧ್ಯಕ್ಷತೆ/ಸನ್ಮಾನ.
೭. ಬೆಂಗಳೂರು,ಮಂಡ್ಯ,ತುಮಕೂರು,ಉತ್ತರ ಕನ್ನಡ,ಚಿಕ್ಕಮಗಳೂರು,ಹಾಸನ,ಬಿಜಾಪುರ ಮೊದಲಾದೆಡೆ ಜಿಲ್ಲಾ ಶೈಕ್ಷಣಿಕ ಸಮ್ಮೇಳನಗಳಲ್ಲಿ ಸನ್ಮಾನ.

**ಸಂಪರ್ಕ ವಿಳಾಸ :**

**ಮೇಟಿಕೆರೆ ಹಿರಿಯಣ್ಣ. ಬಂಡಿಮನೆ. ಬನ್ನಿಮರದ ಸಮೀಪದ ಮನೆ,ರಾಮಕೃಷ್ಣ ಬಡಾವಣೆ,**
**ಚನ್ನರಾಯಪಟ್ಟಣ ೫೭೩೧೧೬, ಹಾಸನ ಜಿಲ್ಲೆ.**
**ದೂರವಾಣಿ ಸಂಖ್ಯೆ : ೦೮೧೭೬-೨೫೩೦೬೮ , ೯೪೪೯೫೮೦೨೭೮**